# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್
# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@gmail.com

6ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು – 560 009.

ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಎಫ್9/2018-19/ಸಿವೈಎಸ್-4 ದಿನಾಂಕ 07 JUL 2018

## ಸುತ್ತೋಲೆ

ವಿಷಯ: Pension Payment Management System ತಂತ್ರಾಂಶದಲ್ಲಿ ಪಿಂಚಣಿ ಬಾಕಿ ಬಿಲ್ಲು/ ತುಟ್ಟಿಭತ್ಯೆ ಬಾಕಿ ಬಿಲ್ಲನ್ನು (Pension /DA Arrears Bill) ಪಡೆಯುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಎಫ್9/2015-16/ಸಿವೈಎಸ್-59 ದಿನಾಂಕ 21.03.2016.
2. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಎಫ್9/2016-17/1365-69 ದಿನಾಂಕ 16.01.2017.
3. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018-19/ಸಿವೈಎಸ್-1 ದಿನಾಂಕ 11.04.2018.
4. ನಿಗಮದ ಅದೇಶ ಸಂಖ್ಯೆ. ಕವಿಪ್ರನಿನಿ/ಬಿ16/69518/2017-18 ದಿನಾಂಕ 05.06.2018.
5. ಈ ಕಛೇರಿ ಸುತ್ತೋಲೆ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ19/2018-19/ಸಿವೈಎಸ್-3 ದಿನಾಂಕ 11.06.2018

**********

ದಿನಾಂಕ 01.04.2016 ರಿಂದ ಜಾರಿಗೆ ಬರುವಂತೆ ಕವಿಪ್ರನಿನಿಯ ಗಣಕಯಂತ್ರ ಶಾಖೆಯು ಅಭಿವೃದ್ಧಿಪಡಿಸಿರುವ Pension Payment Management System ತಂತ್ರಾಂಶವನ್ನು ಕಾರ್ಯಗತಗೊಳಿಸಲಾಗಿದ್ದು, ಪ್ರತಿ ಮಾಹೆ ಈ ತಂತ್ರಾಂಶದಿಂದ ಜನಿತಗೊಂಡ ಪಿಂಚಣಿ ನಿಧಿ ಕೋರಿಕೆ ಆಧಾರದ ಮೇಲೆ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಪಿಂಚಣಿ ನಿಧಿಯನ್ನು ಟ್ರಸ್ಟ್‌ನಿಂದ ವರ್ಗಾವಣೆ ಮಾಡಲಾಗುತ್ತಿದೆ.

ಪೂರಕ ಪಿಂಚಣಿ ಬಿಲ್ಲುಗಳನ್ನು ಈ ತಂತ್ರಾಂಶದಲ್ಲಿ ಪಡೆಯುವಾಗ ಆಗುವ ಅನಾನುಕೂಲಗಳನ್ನು ಉಲ್ಲೇಖ-2 ರ ಪತ್ರದಲ್ಲಿ ಸೂಚಿಸಿದಂತೆ ಬಗೆಹರಿಸಿದ್ದು, Family Pension Sanction, Generate First pension for multiple months from the day of Sanction ಮತ್ತು Generate Manual/Ad hoc Bill (Individual bill) ಮುಂತಾದ ಹೊಸ ವೈಶಿಷ್ಟ್ಯತೆಗಳನ್ನು (New Features) ಅಳವಡಿಸಿಕೊಳ್ಳಲಾಗಿರುತ್ತದೆ.

ದಿನಾಂಕ 01.04.2017 ರಿಂದ 31.03.2018ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿ ಬಾಕಿಯನ್ನು Pension Payment Management System ತಂತ್ರಾಂಶದಲ್ಲಿ ಲೆಕ್ಕಾಚಾರ ಮಾಡಲು ವ್ಯವಸ್ಥೆ ಇಲ್ಲದಿರುವುದರಿಂದ ಪಿಂಚಣಿ ಬಟವಾಡೆ ಲೆಕ್ಕಘಟಕಗಳೇ ತಮ್ಮ ಮಟ್ಟದಲ್ಲಿ ಸೂಕ್ತ ಲೆಕ್ಕಾಚಾರ ವ್ಯವಸ್ಥೆ ಮಾಡಿಕೊಳ್ಳುವಂತೆ ಉಲ್ಲೇಖ-3ರ ಸುತ್ತೋಲೆಯಲ್ಲಿ ತಿಳಿಸಲಾಗಿರುತ್ತದೆ.

ದಿನಾಂಕ 01.04.2017 ರಿಂದ 31.03.2018ರ ಅವಧಿಯ ಪಿಂಚಣಿ/ಕುಟುಂಬ ಪಿಂಚಣಿ ಬಾಕಿಯನ್ನು ಜೂನ್-2018 ರಿಂದ ಪ್ರಾರಂಭಿಸಿ 4 ಕಂತುಗಳಲ್ಲಿ ನಗದಾಗಿ ಪಾವತಿಸಲು ಉಲ್ಲೇಖ-4ರ ಆದೇಶದಲ್ಲಿ ಅನುಮೋದಿಸಿದ ಹಿನ್ನೆಲೆಯಲ್ಲಿ, ಸರ್ಕಾರದ ಭಾಗ ಹಾಗೂ ಕಂಪನಿ ಭರಿಸಬೇಕಾದ ಭಾಗವನ್ನು ವಿಂಗಡಿಸಿ, ಸಂಬಂಧಪಟ್ಟ ದಾಖಲೆಗಳಲ್ಲಿ ನಮೂದಿಸಿ ಉಲ್ಲೇಖ-5ರ ಸುತ್ತೋಲೆಗೆ ಲಗತ್ತಿಸಿರುವ **ನಮೂನೆ-3ರಲ್ಲಿ** ನಿಗದಿತ ದೃಢೀಕರಣದೊಂದಿಗೆ ಆಂತರಿಕ ಪರಿಶೋಧನೆಗೆ ಒಳಪಡಿಸಿ ಟ್ರಸ್ಟ್‌ಗೆ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಪ್ರಸ್ತುತ Pension Payment Management System ತಂತ್ರಾಂಶದಲ್ಲಿ ಈ ಕೆಳಗಿನ ಪೂರಕ ಪಿಂಚಣಿ ಬಿಲ್ಲುಗಳನ್ನು ಜನಿತ ಮಾಡುವುದು ಸಾಧ್ಯವಾಗದಿರುವುದನ್ನು ಗಮನಿಸಲಾಗಿದೆ.

1. 50%/75%/90% ತಾತ್ಕಾಲಿಕ (Provisional) ಪಿಂಚಣಿ ಮಂಜೂರಾಗಿದ್ದು, ನಂತರದಲ್ಲಿ ಪೂರ್ಣ ಪ್ರಮಾಣದ ಪಿಂಚಣಿ ಮಂಜೂರಾದ ಸಂದರ್ಭ.
2. ಪಿಂಚಣಿ ಮಂಜೂರಾತಿ ನಂತರ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿ ವೇತನ ಪರಿಷ್ಕರಣೆಗೊಂಡ ಸಂದರ್ಭದಲ್ಲಿ.
3. 01.07.1993ಕ್ಕಿಂತ ಮುಂಚಿತವಾಗಿ ನಿವೃತ್ತರಾದವರ ಅಥವಾ ಸೇವೆಯಲ್ಲಿರುವಾಗಲೇ ನಿಧನರಾದ ಪಿಂಚಣಿದಾರರು/ಕುಟುಂಬ ಪಿಂಚಣಿದಾರರು 80/85/90 ವರ್ಷಗಳನ್ನು ಪೂರೈಸಿದಾಗ ಕ್ರಮವಾಗಿ ನೀಡುವ 20%, 30% ಮತ್ತು 50% ಹೆಚ್ಚುವರಿ ಪಿಂಚಣಿಯ ವ್ಯತ್ಯಾಸದ ಬಾಕಿ ಮೊತ್ತ ಪಾವತಿಸುವ ಪ್ರಕರಣಗಳು.
4. ತಿಂಗಳಿನ ಮಧ್ಯಭಾಗದಲ್ಲಿ ಪಿಂಚಣಿ/ಕುಟುಂಬ ಪಿಂಚಣಿದಾರರು ನಿಧನಗೊಂಡಾಗ ಭಾಗಶಃ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಮೊತ್ತದ ಬಿಲ್ಲುಗಳನ್ನು ಪಾವತಿಸುವಾಗ.

ಆದ್ದರಿಂದ, ಕವಿಪ್ರನಿನಿಯ ಗಣಕಯಂತ್ರ ಶಾಖೆಯು Pension Payment Management System ತಂತ್ರಾಂಶದಲ್ಲಿ ಪೂರಕ ಪಿಂಚಣಿ ನಿಧಿ ಬಿಲ್ಲು/ತುಟ್ಟಿಭತ್ಯೆ ಬಾಕಿ ಬಿಲ್ಲುಗಳನ್ನು ಜನಿತ (Generate) ಮಾಡಲು ಅನುಕೂಲವಾಗುವಂತೆ ಈ ಕೆಳಗಿನ ಅಂಶಗಳನ್ನು ಒಳಗೊಂಡ ಹೊಸ ವೈಶಿಷ್ಟ್ಯತೆಗಳನ್ನು (New Feature) ಸೇರ್ಪಡೆ ಮಾಡಿರುತ್ತದೆ.

1. ತಂತ್ರಾಂಶದಿಂದ ಪಡೆಯಲು ಸಾಧ್ಯವಾಗದಂತಹ ಪೂರಕ ಪಿಂಚಣಿ ಬಿಲ್ಲುಗಳು.
2. ಈಗಾಗಲೇ ಪಿಂಚಣಿ ಬಿಲ್ಲುಗಳನ್ನು ಜನಿತ ಮಾಡಲಾಗಿದ್ದು, ಪಿಂಚಣಿ ಪರಿಷ್ಕೃತಗೊಂಡ ನಂತರದ ವ್ಯತ್ಯಾಸದ ಬಿಲ್ಲುಗಳು.
3. ಉಲ್ಲೇಖ-5ರಲ್ಲಿ ತಿಳಿಸಿದಂತೆ, 01.04.2017 ರಿಂದ 31.03.2018ರ ಅವಧಿಯ ಪಿಂಚಣಿ ಬಾಕಿ ಬಿಲ್ಲುಗಳು. (ಬಾಕಿ ಉಳಿದಿರುವ 3 ಮಾಸಿಕ ಪಿಂಚಣಿ ಕಂತುಗಳು)
4. ತುಟಿಭತ್ಯೆಯ ವ್ಯತ್ಯಾಸದ ಬಿಲ್ಲುಗಳು.

ಮೇಲಿನ ಹೊಸ ವೈಶಿಷ್ಟ್ಯತೆಗಳನ್ನು (New Feature) ವಿವರವಾಗಿ ವಿವರಿಸಿ user manualನ್ನು Pension Payment Management System ತಂತ್ರಾಂಶದ ಮುಖಪುಟದಲ್ಲಿ Help-User Mannual for Arrears Bill Generation ಶೀರ್ಷಿಕೆಯಡಿಯಲ್ಲಿ ಪ್ರಕಟಿಸಲಾಗಿದೆ. (www.kptcl.com> e-Prasarana>Pension Payment Management System, ಕನ್ನಡದಲ್ಲಿ www.kptcl.com> ಇ-ಪ್ರಸರಣ>ಪಿಂಚಣಿ ಪಾವತಿ ನಿರ್ವಹಣೆ ವ್ಯವಸ್ಥೆ) ಈ Manual ನಲ್ಲಿ ತಿಳಿಸಿರುವ ಅಂಶಗಳನ್ನು ಪಿಂಚಣಿ ಬಟವಾಡೆ ಲೆಕ್ಕಘಟಕಗಳ ಅಧಿಕಾರಿ/ಸಿಬ್ಬಂದಿಗಳು ಕೂಲಂಕುಷವಾಗಿ ಮನನ ಮಾಡಿಕೊಂಡು ಪಾಲಿಸುವುದು.

ಟಿಪ್ಪಣಿ: ಹೊಸದಾಗಿ ಪಿಂಚಣಿ/ಕುಟುಂಬ ಪಿಂಚಣಿ ಮಂಜೂರಾತಿ ಆದಾಗ, ಪಿಂಚಣಿದಾರನ ನಿಧನ ನಂತರ ಕುಟುಂಬ ಪಿಂಚಣಿ ಮಂಜೂರಾತಿ ಆದಾಗ, ಪಿಂಚಣಿದಾರರ ಜೀವಿತ ಪ್ರಮಾಣ ಪತ್ರ/ಕುಟುಂಬ ಪಿಂಚಣಿದಾರರು ಮರು ಮದುವೆ ಪ್ರಮಾಣ ಪತ್ರ ಸಲ್ಲಿಸದೇ ಇರುವುದರಿಂದ ಪಿಂಚಣಿಯನ್ನು ನಿಲ್ಲಿಸಿದ್ದು, ಪ್ರಮಾಣ ಪತ್ರ ಸಲ್ಲಿಸಿದ ತರುವಾಯ ಪೂರಕ ಬಿಲ್ಲುಗಳನ್ನು ಜನಿತ ಮಾಡುವ ಸಂದರ್ಭದಲ್ಲಿ ಪ್ರಸ್ತುತ ತಂತ್ರಾಂಶದಲ್ಲಿ ಈಗಾಗಲೇ ಅಳವಡಿಸಿರುವ Generate First pension for multiple months from the day of Sanction, Family Pension Sanction, ಮತ್ತು Generate Manual/Ad hoc Bill (Individual bill) ಮುಂತಾದ ಈಗಾಗಲೇ ಇರುವಂತಹ ವೈಶಿಷ್ಟ್ಯತೆಗಳನ್ನು (Features) ಮುಂದುವರೆಸಲಾಗಿದೆ.

ಮೇಲಿನ ಹಿನ್ನೆಲೆಯಲ್ಲಿ, **ಜುಲೈ-2018ರ ಮಾಹೆಯಿಂದ ಪ್ರಾರಂಭಿಸಿ manual ಪೂರಕ ಪಿಂಚಣಿ ನಿಧಿ /ತುಟ್ಟಿಭತ್ಯೆ ವ್ಯತ್ಯಾಸ (ಬಾಕಿ) ಬಿಲ್ಲುಗಳನ್ನು ಮತ್ತು ಉಲ್ಲೇಖ-5ರ ಸುತ್ತೋಲೆಯಲ್ಲಿ ತಿಳಿಸಿದಂತಹ ದಿನಾಂಕ 01.04.2017 ರಿಂದ 31.03.2018ರ ಅವಧಿಯ ಪಿಂಚಣಿ ವ್ಯತ್ಯಾಸ ನಿಧಿ ಕೋರಿಕೆ ನಮೂನೆ-3 ನ್ನು ಟ್ರಸ್ಟ್‌ಗೆ ಸಲ್ಲಿಸುವುದನ್ನು ನಿರ್ಬಂಧಿಸಲಾಗಿದೆ. ಎಲ್ಲ ರೀತಿಯ (ಮಾಸಿಕ/ಪೂರಕ/ತುಟ್ಟಿಭತ್ಯೆ ವ್ಯತ್ಯಾಸ) ಪಿಂಚಣಿ ಬಿಲ್ಲುಗಳನ್ನು Pension Payment Management System ತಂತ್ರಾಂಶದಿಂದಲೇ ಕಡ್ಡಾಯವಾಗಿ ಜನಿತ (Generate) ಮಾಡಿ ಟ್ರಸ್ಟ್‌ಗೆ ಪಿಂಚಣಿ ನಿಧಿ ಕೋರಿಕೆಯನ್ನು ದಿನಾಂಕ 20ರೊಳಗೆ ಸಲ್ಲಿಸುವುದು. ಈ ಸೂಚನೆಯನ್ನು ಪಾಲಿಸದಿದ್ದ ಪಕ್ಷದಲ್ಲಿ ಮುಂದಿನ ಪರಿಣಾಮಗಳಿಗೆ ಸಂಬಂಧಿತ ಪಿಂಚಣಿ ಬಟವಾಡೆ ಅಧಿಕಾರಿಗಳೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಯಪಡಿಸಲಾಗಿದೆ.**

ನಿರ್ದೇಶಕರು(ಹಣಕಾಸು),
ಕವಿಪ್ರನಿನಿ ಮತ್ತು ಅಧ್ಯಕ್ಷರು (ಪಿಂ & ಉ ಟ್ರಸ್ಟ್)ರವರಿಂದ
ಅನುಮೋದಿಸಲ್ಪಟ್ಟಿದೆ.

ಆರ್ಥಿಕ ಸಲಹೆಗಾರರು ಮತ್ತು ವ್ಯವಸ್ಥಾಪಕ ಟ್ರಸ್ಟಿ,
ಕವಿಪ್ರನಿನಿ/ವಿಸಕಂಗಳ ಪಿಂಚಣಿ & ಉಪದಾನ ಟ್ರಸ್ಟ್.

ಪ್ರತಿ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕಘಟಕಗಳಿಗೆ ಮೇಲಿನಂತೆ ಸೂಕ್ತ ನಿರ್ದೇಶನ ನೀಡುವಂತೆ ಕೋರಿದೆ:

1. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ & ವಾ), ಬೆವಿಕಂ, ಕೆ.ಆರ್.ವೃತ್ತ, ಬೆಂಗಳೂರು.
3. ಮುಖ್ಯ ಆರ್ಥಿಕ ಅಧಿಕಾರಿ, ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.

ಪ್ರತಿ ಸೂಕ್ತ ಕ್ರಮಕ್ಕಾಗಿ:

4. ಅಧೀಕ್ಷಕ ಇಂಜಿನಿಯರ್(ವಿ), ಮಾಹಿತಿ ತಂತ್ರಜ್ಞಾನ, ಗಣಕಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09 ಕೆಇಪಿಜಿಟಿ ವೆಬ್ ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.
5. ಎಲ್ಲಾ ಲೆಕ್ಕಾಧಿಕಾರಿಗಳು, ಕಾರ್ಯ ಮತ್ತು ಪಾಲನಾ ವಿಭಾಗ/ಆಂ.ಪ, ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ.
6. ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಎಂ.ಆರ್.ಎಸ್.ಶಿವಮೊಗ್ಗ/ವ್ಯವಸ್ಥಾಪಕರು(ನ&ಲೆ), ಕಾವೇರಿ ಭವನ.